ನೋಡಿಕೊಂಡು, ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳನ್ನು ಸರ್ಕಾರದವರು ಕೈಗೊಳ್ಳಬೇಕು. ಈಗ ಸರ್ಕಾರದವರು ಕೆಲವು ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಉದಾಹರಣೆಗೆ ಭದ್ರಾವತಿ ಮತ್ತು ಎಂ. ಎಸ್. ಆರ್. ಟಿ. ಸಿ. ಇತ್ಯಾದಿ. ಇದರಲ್ಲಿ ಎಷ್ಟು ಹಣ ಪೋಲಾಗುತ್ತದೆ ಅಂದರೆ ಜರಡಿಯಲ್ಲಿ ನೀರು ಹಾಕಿದ ಹಾಗೆ ಆಗಿದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಮೊನ್ನೆ ಸಾರಿಗೆ ನಚಿವರು ಒಂದು ದಿವಸ ಕೋಲಾರಕ್ಕೆ ಭೇಟಿ ಕೊಟ್ಟರು. ಆವತ್ತಿನ ದಿವಸ ಬೆಂಗಳೂರಿನಿಂದ ಕೋಲಾರಕ್ಕೆ ಬರುವಂತಹ ಸರ್ಕಾರಿ ಬಸ್ಸುಗಳ ಆದಾಯ ಒಂದೇ ದಿವಸ 5 ಸಾವಿರ ರೂಪಾಯಿಗೆ ಏರಿದೆ. ಬಾಕಿ ದಿನಗಳಲ್ಲಿ ಆಗದೇ ಇರುವುಕ್ಕೆ ಕಾರಣವೇನೆಂದರೆ ಅಲ್ಲಿ ಖಾಸಗೀ ಬಸ್ ಮಾಲೀಕರು ಓಡಿಸುತ್ತಿರುವ ಬಸ್ಸುಗಳಿಂದ ಸರ್ಕಾರಿ ಬಸ್ಸುಗಳಿಗೆ ಸರಿಯಾದ ಆದಾಯ ಬರುತ್ತಾ ಇಲ್ಲ. " ಆನ್ ಕಂಟ್ರಾಕ್ಟ್ " ಎಂದು ಬೋರ್ಡು ಹಾಕಿಕೊಂಡು ಓಡಿಸುತ್ತಾ ಇದ್ದಾರೆ. ಆದ್ದರಿಂದ ಇದರಿಂದ ಒಂದು ದಿವಸಕ್ಕೆ 5 ಸಾವಿರ ರೂಪಾಯಿಯಷ್ಟು ನಷ್ಟ ಸರ್ಕಾರಿ ಬಸ್ಸುಗಳಿಗೆ ಆಗುತ್ತದೆ. ಅಂದರೆ ಒಂದು ರೂಟಿನಲ್ಲಿ ಒಂದು ದಿವಸಕ್ಕೆ 5 ಸಾವಿರ ನಷ್ಟವಾದರೆ ಒಂದು ತಿಂಗಳಿಗೆ ಒಂದೂವರೆ ಲಕ್ಷ ರೂಪಾಯಿ ನಷ್ಟವಾಯಿತು ಒಂದು ವರ್ಷಕ್ಕೆ ಸುಮಾರು 18 ಲಕ್ಷ ರೂಪಾಯಿ ನಷ್ಟವಾಯಿತು. ಇದಕ್ಕೆ ನಮ್ಮ ಮಂತ್ರಿಯವರು ಏಕೆ ಗಮನ ಕೊಡುತ್ತಾ ಇಲ್ಲವೆಂದು ಅರ್ಥವಾಗುವುದಿಲ್ಲ. ಈ ರೀತಿ ಸರ್ಕಾರಿ ಉದ್ಯಮಗಳಲ್ಲಿ ಹಣ ಪೋಲಾಗುತ್ತಾ ಇದ್ದರೆ, ಇವತ್ತು ವಾಟರ್ ರೇಟ್ ಹಾಕಬೇಕಾಗುತ್ತದೆ, ನಾಳೆ ಇನ್ನೊಂದು ತೆರಿಗೆಯನ್ನೂ ಹಾಕಬೇಕಾಗುತ್ತದೆ. ಈ ರೀತಿ ಸರ್ಕಾರಿ ಕ್ಷೇತ್ರದ ಉದ್ದಿಮೆಗಳನ್ನು ಸರಿಯಾದ ರೀತಿಯಲ್ಲಿ ನಡೆಸದೆ ಇರುವುದರಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಶೋಚನಿಯವಾಗಿ ಇಲ್ಲದ ತೆರಿಗೆಗಳನ್ನು ಬಡ ಜನರ ಮೇಲೆ ಹೊರಿಸಬೇಕಾದ ಪ್ರಸಂಗ ಇಂದು ಸರ್ಕಾರದವರಿಗೆ ಬಂದೊದಗಿದೆ. ಇನ್ನೂ ಹೆಚ್ಚಿನ ಸುಂಕಗಳನ್ನು ಮತ್ತು ತೆರಿಗೆಗಳನ್ನು ಹಾಕಬೇಕಾಗಿ ಬರುತ್ತದೆ. ಬಂಡವಾಳಶಾಹಿಗಳ ಅಭಿಪ್ರಾಯದಲ್ಲಿ ತೆರಿಗೆ ಇಲ್ಲದೆ ಯಾವ ಸರ್ಕಾರವೂ ನಡೆಯುವುದಿಲ್ಲ ಎಂಬುದಾಗಿದೆ. ಅದು ನಮಗೂ ಗೊತ್ತಿದೆ. ತೆರಿಗೆ ಹಾಕುವುದರಲ್ಲಿ ನಾನು ವಿರೋಧಿಯಲ್ಲ. ಆದರೆ ಹಾಗೆ ಹಾಕುವಾಗ ಈಗ ಯಾವುದರ ಮೇಲೆ ತೆರಿಗೆ ಹಾಕಬೇಕು, ನಮ್ಮಲ್ಲಿರತಕ್ಕ ಉತ್ಪನ್ನ ಸಾಧನಗಳು ಸರಿಯಾಗಿವೆಯೇ, ನಾವು ನಡೆಸತಕ್ಕ ಆಡಳಿತ ಸರಿಯಾಗಿದೆಯೇ, ಎಂಬುದನ್ನು ನೋಡಬೇಕು. ಆ ಉತ್ಪನ್ನ ಸಾಧನಗಳಿಂದ ಬರತಕ್ಕ ಉತ್ಪಾದನೆಗಳನ್ನು ಬಿಟ್ಟು ಬೇರೆ ತೆರಿಗೆಗಳನ್ನು ಜನಗಳಿಂದ ವಸೂಲುಮಾಡಿಕೊಡಿ ಎಂಬುದಾಗಿ ಹೇಳಿದರೆ ಅದು ಸೂಕ್ತವಾದುದಲ್ಲ. ಜರಡಿಯಲ್ಲಿ ನೀರನ್ನು ತುಂಬಿ ಹಾಕಿದರೆ ಯಾವ ರೀತಿಯಲ್ಲಿ ಅದು ಒಂದೊಂದು ಹನಿಯಾಗಿ ಬದ್ದು ಹೋಗುತ್ತದೆಯೋ ಆ ರೀತಿಯಲ್ಲಿ ಸರಕಾರಿ ಉದ್ಯಮಗಳಲ್ಲಿ ಹಣ ಪೋಲಾಗುವುದಕ್ಕೆ ಅವಕಾಶಕೊಟ್ಟು ನೀವು ಜನಗಳ ಮೇಲೆ ಹೊರಲಾರದಷ್ಟು ತೆರಿಗೆಗಳನ್ನು ಹಾಕಿದರೆ, ಅವರು ಅದನ್ನು ಹೊರುವುದಕ್ಕಾಗದೆ ತುಂಬಕಷ್ಟಪಡುತ್ತಾರೆ. ಆದ್ದರಿಂದ ಈ ರೀತಿಯಾಗಿ ಹೆಚ್ಚು ತೆರಿಗೆಯನ್ನು ಹಾಕುವುದನ್ನು ಕೂಡಲೇ ತಡೆಗಟ್ಟಿ ಎಲ್ಲ ವಿಷಯಗಳನ್ನು ಗಮನಿಸಿ ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ನಮ್ಮ ಜನತೆಯ ಮೇಲೆ ಕಡಿಮೆ ಸುಂಕದ ಭಾರವನ್ನು ಹೊರಿಸಬೇಕು. ನಾನು ಅರ್ಥಮಂತ್ರಿಗಳಲ್ಲಿ ಪಾರ್ಥನೆಮಾಡುವುದೇನೆಂದರೆ, ಬಡ್ಜೆಟ್ ಭಾಷಣ ಮಾಡುವಾಗ ಹೆಚ್ಚು ವಿವರಗಳನ್ನು ಈ ಸಭೆಯಲ್ಲಿ ಹೇಳಬೇಕೆಂದಿದ್ದೆ. ಆದರೆ ಈ ದಿವಸ ನನಗೆ ಭಾಷಣ ಮಾಡಲು ಅವಕಾಶ ದೊರಕುತ್ತದೆಂದು ತಿಳಿದಿರಲಿಲ್ಲ. ಅದಕ್ಕಾಗಿ ನಾನು ಈ ದಿವಸ ಬಡ್ಜೆಟ್ ಭಾಷಣ ಮಾಡಲು ತಯಾರಾಗಿಯೂ ಬಂದಿರಲಿಲ್ಲ. ಅಧ್ಯಕ್ಷರ ಒಂದು ಆದೇಶದ ಮೇಲೆ ನಾನು ಇವತ್ತು ಮಾತನಾಡಬೇಕಾಯಿತು. ಆದ್ದರಿಂದ ನನಗೆ ಈಗ ಈ ಸಭೆಯಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Statement of the Minister for Municipal Administration *re*: Eviction of the dwellers in Hosahalli layout

ಅಧ್ಯಕ್ಷರು.—ಮೊನ್ನೆ ಹೊಸಹಳ್ಳಿ ನ್ಯೂಲೇಔಟ್‌ನಲ್ಲಿ ಹೊಸದಾಗಿ ಗುಡಿಸಲುಗಳನ್ನು ಕಟ್ಟಿಸಿದ್ದಾರೆ. ಆ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಒಂದು ಸ್ಟೇಟ್‌ಮೆಂಟನ್ನು ಈಗ ಮಾಡಬೇಕೆಂದಿದ್ದಾರೆ. ಈ ವಿಚಾರವನ್ನು ವಿರೋಧಪಕ್ಷದ ನಾಯಕರು ಕೇಳಿದ್ದರು. ಆ ಪ್ರಕಾರ ಮಂತ್ರಿಗಳು ಹೇಳುವ ಸ್ಟೇಟ್‌ಮೆಂಟನ್ನು ನಾವು ಕೇಳಬೇಕು.

† ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೋತ್ತರಗಳ ವೇಳೆಯಾದನಂತರ ವಿಧಾನಪರಿಷತ್ತಿನಲ್ಲಿ ಮೊದಲನೆಯ ಪ್ರಶ್ನೆಯೇ ನನ್ನದು ಇದ್ದುದರಿಂದ ನಾನು ಈ ಸಭೆಯನ್ನು ಬಿಟ್ಟು ಹೋಗಬೇಕಾಯಿತು. ನಾನು ಅಲ್ಲಿಗೆ ಹೋದಮೇಲೆ ಈ ಸಭೆಯಲ್ಲಿ ನನ್ನ ಕೆಲವು ಸ್ನೇಹಿತರಾದ ಈ ಸಭಾನದಸ್ಯರು ಕೆಲವು ಆರೋಪಣೆಗಳನ್ನು ನನ್ನ ಮೇಲೆ ಮಾಡುವುದರ ಜೊತೆಗೆ ಕೆಲವು ಸಮಸ್ಯೆಗಳನ್ನು ಎತ್ತಿದ್ದಾರೆ. ಅದಕ್ಕೆ ಉತ್ತರ ಕೊಡುವುದು ನನ್ನ ಧರ್ಮ. ನಾನು ಈ ಸಭೆಯಲ್ಲದ್ದಾಗಲೇ ಇಂತಹ ಸಮಸ್ಯೆಗಳನ್ನು ಎತ್ತಿದ್ದರೆ ನನಗಂತೂ ಬಹಳ ಆನಂದವಾಗುತ್ತಿತ್ತು. ಮತ್ತೆ ಈ ಸಭೆಯ ಏನು ಪ್ರೊಸೀಜರ್ ಇದೆಯೋ ಅದರ ಪ್ರಕಾರ ನೋಟೀಸ್ ಕೊಟ್ಟಿದ್ದರೆ ನಾನು ಈ ಸಭೆಯಲ್ಲಿಯೇ ಇದ್ದು ಅವರಿಗೆ ಸಮಂಜಸವಾದ ಉತ್ತರವನ್ನು ಕೊಡುತ್ತಿದ್ದೆ. ಆದರೆ ಏಕಾಏಕಿ ಕೆಲವು ಸಮಸ್ಯೆಗಳನ್ನು ಎತ್ತಿ ನಾನು ಇಲ್ಲದೇ ಇದ್ದಾಗ ಅದರಲ್ಲಿಯೂ ಕೆಲವು ಸಾರ್ವಜನಿಕರ ಸಮಸ್ಯೆಗಳ ಜೊತೆಗೆ ವೈಯುಕ್ತಿಕವಾದ ಆರೋಪಣೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ನಾನು ಉತ್ತರ ಕೊಡುವುದು ಈ ಸಂದರ್ಭದಲ್ಲಿ ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತೇನೆ. ಈಗ ನಾನು ಕೆಲವು ಅಪಾದನೆಗಳಿಗೆ ಉತ್ತರ ಕೊಡುವುದಕ್ಕೆ ಮುಂಚಿತವಾಗಿ ಅಲ್ಲರತಕ್ಕ ವಿಧ್ಯಮಾನಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿ ಮುಂದುವರಿಸುತ್ತೇನೆ. ಕೆಂಪಾಪುರ ಅಗ್ರಹಾರದಲ್ಲಿ 481ನೇ ಸರ್ವೇ ನಂಬರ್‌ನಲ್ಲಿ ಜಮೀನನ್ನು ಟ್ರಸ್ಟ್‌ಬೋರ್ಡಿನವರು ಅಕ್ಕ್ಯೂರ್ ಮಾಡಿದರು. ಅದರ ಬಗ್ಗೆ 1971ರಲ್ಲಿ ಬೇಕಾದಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಹೊಸಹಳ್ಳಿ ರೇಔಟ್ ಹೊಸದೇನೂ ಅಲ್ಲ. ಅಲ್ಲಿ ಜಮೀನನ್ನು ಅಕ್ಕ್ಯೂರು ಮಾಡಿದಮೇಲೆ ಅದು ಟ್ರಸ್ಟ್‌ಬೋರ್ಡಿನ ಜಮೀನಾಗಿತ್ತು. ಕೆಲವು ಜನರು ಸ್ವೇಚ್ಛೆಯಾಗಿ ಮನೆ ಕಟ್ಟುವ ಪ್ರವೃತ್ತಿ ಅದರಲ್ಲಿಯೂ ಬೆಂಗಳೂರು ಸಿಟಿಯಲ್ಲಿ ಹೊಸದಲ್ಲ. ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ನಾನು ಹೋದಾಗ ಒಂದು ಮನೆ.....

ಶ್ರೀ ವಾಟಾಳ್ ನಾಗರಾಜ್.—ಒಂದು ಮನೆ ಒಡೆದು ಹಾಕಿದ ಬಗ್ಗೆ ನಾವು ಯಾವತ್ತೂ ಕೇಳಲಲ್ಲ. ಅದರ ಬಗ್ಗೆ ನಮ್ಮಲ್ಲಿ ಬೇಕಾದಷ್ಟು ಮಾಹಿತಿ ಇದೆ. ಮನೆ ಒಡೆದು ಹಾಕಿದ ಪ್ರಶ್ನೆ ನಾವಿನ್ನೂ ಎತ್ತಿಲ್ಲ. ನಾವು ನಿಮ್ಮ ಹತ್ತಿರ ಬಂದು ಹೇಳಿದ ವಿಷಯ ವಿಧಾನಸೌಧದ ಹತ್ತಿರ ಬಂದು ಕುಳಿತಿರುವ ಗುಡಿಸಲು ನಿವಾಸಿಗಳ ವಿಷಯ. ಆದ್ದರಿಂದ ನಾವು ಹೇಳಿವ ಸಬ್ಜೆಕ್ಟೇ ಬೇರೆ. ಅವರು ಉತ್ತರ ಕೊಡುತ್ತಾ ಇರುವುದು ಬೇರೆ ವಿಷಯ. ಮಾನ್ಯ ಮುಖ್ಯಮಂತ್ರಿಗಳು 200 ಗುಡಿಸಲುಗಳನ್ನು ಕಾನೂನುಬದ್ಧವಾಗಿ ಆ ಗುಡಿಸಲು ನಿವಾಸಿಗಳಿಗೆ ಕಟ್ಟಿಸಿಕೊಡುತ್ತೇವೆ ಎಂಬುದಾಗಿ ಹೇಳುತ್ತಿದ್ದಾರೆ. ಅದನ್ನು ಕೂಡಲೇ ಮಾಡಬೇಕು. ಮನೆ ಇರುವವರಿಗೆ ಮನೆ ಕೊಡಿ ಎಂಬುದಾಗಿ ಹೇಳುವುದಿಲ್ಲ. ಮನೆ ಇಲ್ಲದೇ ಇರುವವರಿಗೆ ಗುಡಿಸಲನಲ್ಲಿ ರಕ್ಷಣೆ ಕೊಡಿ ಎಂಬುದಾಗಿ ನಾವು ಹೇಳುತ್ತಾ ಇರುವುದು. ನಮಗೆ ವೈಯುಕ್ತಿಕವಾಗಿ ಯಾರಮೇಲೂ ಆರೋಪಣೆ ಮಾಡಬೇಕೆಂಬ ಉದ್ದೇಶವಿಲ್ಲ. ಮನೆ ಒಡೆದುಹಾಕಿದ ವಿಷಯ ಇಲ್ಲಿ ಇನ್ನೂ ಬಂದೇ ಇಲ್ಲ. ಆ ಗುಡಿಸಲುಗಳನ್ನು ಈ ಮಧ್ಯೆ ನಾನೇ ಹೋಗಿ ಖುದ್ದಾಗಿ ನೋಡಿಕೊಂಡು ಬಂದಿದ್ದೇನೆ. ಆ ಗುಡಿಸಲುಗಳಲ್ಲಿ ಕೇವಲ ಕಟ್ಟಿಗೆ ಆಸ್ತಿ ಇಟ್ಟುಕೊಂಡಿದ್ದಾರೆ. ಅಂತಹವರು ಈ ದಿನ ಇಲ್ಲಿಗೆ ಮೆರವಣಿಗೆ ತೆಗೆದುಕೊಂಡು ಬಂದಿದ್ದಾರೆ. ಅವರಿಗೆ ಯಾವ ರೀತಿಯಲ್ಲಿಯೂ ರಕ್ಷಣೆ ಇಲ್ಲ. ಮಂತ್ರಿಗಳ ಫೋಟೊಗಳನ್ನೇ ಅದರಲ್ಲಿಯೂ ಮುಖ್ಯಮಂತ್ರಿಗಳ ಫೋಟೊವನ್ನು ತಮ್ಮ ಮುಂದಿಟ್ಟುಕೊಂಡು ಮೆರವಣಿಗೆಯಲ್ಲಿ ಬಂದು ವಿಧಾನಸೌಧದ ಹಿಂಬದಿಯಲ್ಲಿ ಈಗ ಕುಳಿತಿದ್ದಾರೆ. ನಾವಿನ್ನೂ ಮಂತ್ರಿಗಳು ಮನೆ ಒಡೆದು ಹಾಕಿದ ಪ್ರಕರಣವನ್ನು ಈ ಸಭೆಯಲ್ಲಿ ತಂದೇ ಇಲ್ಲ. ಅದಕ್ಕೆ ಬೇಕಾದಂಥ ಸಾಕ್ಷಿ, ಸಾಹಿತ್ಯ ಮತ್ತು ಫೋಟೋಗಳು ಇವೆ. ಅವನ್ನು ಇನ್ನೂ ಇಲ್ಲಿ ತಂದಿಲ್ಲ. ಇವತ್ತು ನಮಗೆ ಮಂತ್ರಿಗಳಿಂದ ಉತ್ತರ ಬೇಕಾಗಿರುವುದು ಇಲ್ಲಿಗೆ ಬಂದಿರುವ ಗುಡಿಸಲು ನಿವಾಸಿಗಳ ಬಗ್ಗೆ. ಆ ವಿಷಯವನ್ನು ಕುರಿತು ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡಬೇಕೆಂದು ತಾವು ಅವರಿಗೆ ನೂಚನೆ ಕೊಡಿ. ಈ ಸಭೆಯಲ್ಲಿ ಮಂತ್ರಿಗಳೇ ಆ ಮನೆ ಕೆಡವಿದ ವಿಚಾರವನ್ನೂ ಸಹ ಮುಂದೆ ಪ್ರಸ್ತಾಪಮಾಡಬೇಕಾಗುತ್ತದೆ. ಒಂದು ವೇಳೆ ಮಂತ್ರಿಗಳು ಈಗ ಅಲ್ಲಿ ಮನೆ ಒಡೆದು ಹಾಕಿದ ವಿಷಯವಾಗಿ ಮಾತನಾಡುವುದಾದರೆ ತಾವು ಮಂತ್ರಿಗಳಿಗಿಂತಲೂ ಹೆಚ್ಚಿನ ಅಧಿಕಾರವನ್ನುಳ್ಳವರು ಆಗಿರುವುದರಿಂದ ಆ ಬಗ್ಗೆ ಉತ್ತರ ಕೊಡಬೇಕಾಗಿಲ್ಲವೆಂದು ತಿಳಿಸಬೇಕು. ನಾಳೆ ಬೇಕಾದರೆ ಅವರು ಉತ್ತರ ಹೇಳಲಿ. ಏಕೆಂದರೆ ನಾವು ಅವಕ್ಕೆ ಸಂಬಂಧಪಟ್ಟ ಸಾಕ್ಷಿ ಸಾಹಿತ್ಯಗಳನ್ನು ತರಬೇಕಾಗುತ್ತದೆ.

ಅಧ್ಯ ರು.—ಇವತ್ತು ಬೆಳಿಗ್ಗೆಯಿಂದ ಒಂದು ಸಮಸ್ಯೆ ಎದ್ದಿದೆ. ಗುಡಿಸಲುಗಳನ್ನು ಕಿತ್ತು ಹಾಕಿರುವವರು ವಿಧಾನಸೌಧದ ಹಿಂಭಾಗದಲ್ಲಿ ಕೂತುಕೊಂಡು ಅಸೆಂಬ್ಲಿ ಮೆಂಬರುಗಳು ಸಭೆಗೆ ಬಾರದೆ ಇರುವ ಹಾಗೆ ಮಾಡಲು ಕಾದುಕೊಂಡಿದ್ದಾರೆ. ಅವರಿಗೆ ಮನೆಗಳು ಇಲ್ಲ. ಅವರ ಬಗ್ಗೆ ಈ ಸಭೆಯಲ್ಲ ಏನು ಹೇಳುತ್ತೀರೋ ಅದನ್ನು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಈ ವಿಚಾರಕ್ಕೆ ಸಂಬಂಧಪಟ್ಟಹಾಗೆ ಸ್ವಲ್ಪ ಹಿನ್ನೆಲೆ ಹೇಳಿದೆ ಇದ್ದರೆ ಅದು ಸರಿಹೋಗುವುದಿಲ್ಲ. ಸ್ಥಳ ಅಜಮಾಯಿಷಿ ಬಗ್ಗೆ ನಾನು ಮತ್ತು ಸಂಬಂಧಪಟ್ಟ ಕೆಲವು ಅಧಿಕಾರಿಗಳು ಮತ್ತು ಟ್ರಸ್ಟ್‌ಬೋರ್ಡಿನ ಚೇರಮನ್ ನಗ್ಮೆರೆ ಬೆಂಗಳೂರು ಸಿಟಿಯಲ್ಲಿ ಕೆಲವು ಪ್ರದೇಶಗಳನ್ನು ಪರಿಶೀಲನೆಮಾಡಬೇಕೆಂದು ಹೋದಾಗ ಹೊಸಹಳ್ಳಿಯ ಬಡಾವಣೆಗೆ ಭೇಟಿ ಇತ್ತಿದ್ದೆವು. ಅಲ್ಲಿ ಭೇಟಿ ಕೊಟ್ಟಾಗ್ಗೆ ಏನೊಂದು ಮನೆ ಹೊಸದಾಗಿ ಬರುತ್ತಿತ್ತೊ ಆ ಮನೆಯ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದೆ. ಎಲ್ಲಿ ಯಾವ ಪ್ರದೇಶದಲ್ಲಿ ಮನೆ ಹೊಸದಾಗಿ ಆಗುತ್ತಿತ್ತೊ ಅದು ಟ್ರಸ್ಟ್‌ಬೋರ್ಡ್ ಜಮೀನು. ಅದರ ಮೇಲೆ ಮನೆ ಕಟ್ಟುತ್ತಿದ್ದಾರೆ, ನೀವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂಬುದಾಗಿ ಅಧಿಕಾರಿಗಳನ್ನು ಕೇಳಿದರೆ, ನಾವು ನೋಟೀಸ್ ಕೊಟ್ಟಿದ್ದೆವೆಂದು ಹೇಳಿದರು. ಮನೆ ಕಟ್ಟುತ್ತಿದ್ದವರನ್ನು ಕೇಳಿದರೆ, ನಮಗೆ ಮನೆ ಇಲ್ಲ, ಹಾಗೆಯೇ ಕಟ್ಟುತ್ತಿದ್ದೇವೆ ಎಂದು ಹೇಳಿದರು. ಅದಕ್ಕೊಸ್ಕರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಕೆಡವಿದ ಮನೆ ಬಗ್ಗೆ ಈಗ ಉತ್ತರ ಕೊಡಬೇಕೆಂದು ಕೇಳಲಿಲ್ಲ. ಅದರ ಬಗ್ಗೆ ಮಾತನಾಡುತ್ತಲೂ ಇಲ್ಲ. ಆ ಮನೆಯ ಬಗ್ಗೆ ನನ್ನಲ್ಲಿ ಸಾಕ್ಷಿ, ಸಾಹಿತ್ಯ, ಆಧಾರವೆಲ್ಲವೂ ಇದೆ. ಅದರ ಬಗ್ಗೆ ಮಾತನಾಡಲು ಹೋಗಬೇಡಿ. ಅವರಿಗೆ ಕೊಟ್ಟ ಹಾಗೆ ನಮಗೂ ತಾವು ಇದರ ಬಗ್ಗೆ ಚರ್ಚೆಮಾಡಲು ಅವಕಾಶವನ್ನು ಕೊಡಬೇಕು. ಮಂತ್ರಿಗಳ ಬೋರ್ಡ್ ಹಿಡಿದುಕೊಂಡು ಅವರ ಮೇಲೆಯೇ ಆರೋಪಣೆ ಮಾಡುತ್ತಿದ್ದಾರೆ. ನೀವು ಅನ್ಯಾಯ ಮಾಡಿದರೆ ಖಂಡಿತವಾಗಿ ಅವರು ಬಿಡುವುದಿಲ್ಲ. ಅವರು ಇಂತಹ ಪಾಪದ ಕೆಲಸವನ್ನು ಮಾಡುವುದು ಬೇಡ. ಅದರ ಬಗ್ಗೆ ನಾವು ಮುಂದೆ ಚರ್ಚೆ ಮಾಡಬೇಕಾಗುತ್ತದೆ. ಆದರೆ ಅವರು ಗುಡಿಸಲುಗಳ ವಿಷಯ ಬಿಟ್ಟು ಮನೆಯ ಬಗ್ಗೆ ಹೇಳುತ್ತಿದ್ದಾರೆ. ತಾವು ಅವರಿಗೆ ಸರಿಯಾಗಿ ಸೂಚನೆಯನ್ನು ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಏಕೆ ಇಷ್ಟು ಅವಸರವೋ ಗೊತ್ತಿಲ್ಲ. ಏನು ಪ್ರಪಂಚ ಮುಳುಗಿಹೋಗಿದೆ. ನೀವೂ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡಿರುವವರೇ, ನಾವೂ ನಿಮಗಿಂತಲೂ ಹೆಚ್ಚಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡಿರುವವರು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳೇನಿದ್ದರೂ ಆ ಮನೆಯ ಬಗ್ಗೆ ಅವರ ಕಥೆಯನ್ನು ಡೆವಲಪ್ ಮಾಡುತ್ತಿದ್ದಾರೆಯೇ ಏನಾ ಆ ಸಾವಿರಾರು ಗುಡಿಸಿಲುಗಳನ್ನು ಕಿತ್ತು ಹಾಕಿಸಿದ್ದರ ಬಗ್ಗೆ ಏನೂ ಹೇಳುತ್ತಿಲ್ಲ. ಅದನ್ನು ಕೈ ಬಿಟ್ಟು ಬೇರೆ ಎಲ್ಲವನ್ನೂ ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾನೇನು ವಿಷಯವನ್ನು ಹೇಳುತ್ತಿದ್ದೇನೋ ಅದನ್ನೇ ಅವರೂ ಹೇಳುತ್ತಿದ್ದಾರೆ. ಇದರಲ್ಲಿ ಯಾವುದನ್ನೂ ಮುಚ್ಚುಮರೆ ಮಾಡುವುದಕ್ಕಾಗುವುದಿಲ್ಲ. ನಾನು ಇದ್ದುದನ್ನು ಇದ್ದಹಾಗೆ ವಿವರವಾಗಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಸ್ವಲ್ಪ ಸಾವಧಾನದಿಂದ ಇರಬೇಕು. ಕಾನೂನಿಗೆ ವಿರುದ್ಧವಾಗಿ ಹದ್ದುಮೀರಿ ಸರ್ಕಾರಿ ಭೂಮಿಯಲ್ಲಿ ಆಗಲಿ ಅಥವಾ ಟ್ರಸ್ಟ್ ಬೋರ್ಡಿಗೆ ಸೇರಿದ ಪ್ರದೇಶವಲ್ಲಾಗಲೀ ಅಥವಾ ಕಾರ್ಪೊರೇಷನ್ನಿಗೆ ಸೇರಿರತಕ್ಕ ಏರಿಯಾದಲ್ಲೇ ಆಗಲಿ ಅವರು ಯಾರೇ ಆಗಿರಲಿ ಅಕ್ರಮವಾಗಿ ಮನೆಗಳನ್ನಾಗಲೀ ಅಥವಾ ವಾಸದ ಗುಡಿಸಲುಗಳನ್ನಾಗಲಿ ಕಟ್ಟಿಕೊಂಡಿದ್ದರೆ ಅಂಥವುಗಳನ್ನು ಸರ್ಕಾರದವರು ತೆಗಿಸಿಹಾಕುವುದಕ್ಕೆ ಕ್ರಮವನ್ನು ಕೈಗೊಳ್ಳಲೇಬೇಕು. ಹಾಗೆ ಒಂದು ವೇಳೆ ನಾನು ಕ್ರಮವನ್ನು ಕೈಗೊಳ್ಳದಿದ್ದರೆ ಆಗಲೂ ನೀವೇ ನನ್ನನ್ನು ಕೆಲಸಕ್ಕೆ ಬಾರದವನು ಎಂದು ಟೀಕೆ ಮಾಡುತ್ತೀರಿ.

ನಾನು ಶ್ರೀ ವಾಟಾಳ್ ನಾಗರಾಜು ಅವರನ್ನು ಬಹಳ ದಿವಸಗಳಿಂದಲೂ ಬಲ್ಲೇ. ನಾವಿಬ್ಬರೂ ಹಿಂದಿನಿಂದಲೂ ಸ್ನೇಹಿತರಾಗಿದ್ದವರೇ. ಆದರೆ ಅವರು ಇಂಥ ಒಂದು ಸಾಮಾನ್ಯ ವಿಚಾರವನ್ನು ಇಷ್ಟು ದೊಡ್ಡದನ್ನಾಗಿ ಮಾಡಬಾರದು. ಇದರಲ್ಲಿ ಏನು ತಪ್ಪಾಗಿದೆ ? ಅಕ್ರಮವಾಗಿ ಕಾನೂನು ಬಾಹಿರವಾಗಿ ಹದ್ದುಮೀರಿ ಮನೆಗಳನ್ನು ಕಟ್ಟಿರತಕ್ಕವರ ಬಗ್ಗೆ ಸರ್ಕಾರ ಏನು ಒಂದು ಹುಕುಮನ್ನು ಹೊರಡಿಸುತ್ತದೋ ಅದನ್ನು ಪಾಲನತಕ್ಕದ್ದು ಇರಾಜೆಯವರ ಕರ್ತವ್ಯ. ಅವರು ಅದನ್ನು ಮಾಡಿದ್ದಾರೆ. ಹಾಗೆ ಅವರು ಸರ್ಕಾರದ ಆಜ್ಞೆಯನ್ನು ಪಾಲಿಸಿದ್ದು ತಪ್ಪೇ, ಎಂದು ಅವರನ್ನು ಕೇಳುತ್ತೇನೆ ? ಇಲ್ಲಿ ಆರೋಪಣೆ ಮಾಡತಕ್ಕ ಪ್ರಸಂಗವೇ ಇರುವುದಿಲ್ಲ. ನಾನೇ ಹೊಸಹಳ್ಳಿ ರೇಶಿಟನಲ್ಲಿ ಎದುರಿಗೆ ನಿಂತುಕೊಂಡು ಮನೆಯನ್ನು ಡಿಮಾಲಿಷ್ ಮಾಡಿಸಿದೆ ಎಂದು ಆರೋಪಣೆ ಮಾಡತಕ್ಕದ್ದು ಸತ್ಯಕ್ಕೆ ದೂರವಾದ ವಿಷಯ. ನಾನು ಇಲ್ಲಿ ಅಕ್ರಮವಾಗಿ, ಕಾನೂನಿಗೆ ವಿರೋಧವಾಗಿ ಕಟ್ಟಿರತಕ್ಕ ಕಟ್ಟಡಗಳನ್ನು ತೆಗೆಸಿಹಾಕಬೇಕೆಂಬ ಆಜ್ಞೆಯನ್ನು ತಿಳಿಸಿ ಆ ಸ್ಥಳದಲ್ಲಿ ನಾನು ನಿಲ್ಲಲೇ ಇಲ್ಲ. ನಾನು ಬೇರೆ ಕಡೆ ಹೊರಟುಹೋದೆ. ಇರಾಜೆಯವರು ಆಜ್ಞೆಯ ಪ್ರಕಾರ ಕ್ರಮ ನಡೆಸಿದ್ದಾರೆ. ಇನ್ನು ಗುಡಿಸಿಲುಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನರ ಹಿತಸಾಧನೆಗಾಗಿ ನಾನು ಹೋರಾಟ ಮಾಡಲು ನನ್ನ ಜೀವನವನ್ನೇ ಮುಡುಪಾಗಿಟ್ಟಿರತಕ್ಕವನು

(ಶ್ರೀ ಬಿ. ಬಸವಲಿಂಗಪ್ಪ)

ಎಂಬ ವಿಚಾರ ಶ್ರೀ ವಾಟಾಳರಿಗೂ ಗೊತ್ತಿದೆ. ಆದರೆ ಅಕ್ರಮ ನಡವಳಿಕೆಗೆ ಅವಕಾಶವಾಗ ಬಾರದು ಎಂಬುದು ನನ್ನ ಆಸೆ. ನಾನು ಇದೇ ವಿಚಾರದಲ್ಲಿ ಪತ್ರಿಕಾ ಪ್ರತಿನಿಧಿಗಳನ್ನೂ ಕರೆಸಿ ಕಾನೂನಿಗೆ ವ್ಯತಿರಿಕ್ತವಾಗಿ ಅಕ್ರಮದಿಂದ ಹದ್ದುಮೀರಿ ಯಾರು ಸರ್ಕಾರಿ ನಿವೇಶನಗಳಲ್ಲಿ ಅಥವಾ ಟ್ರಸ್ಟ್ ಬೋರ್ಡಿನ ನಿವೇಶನಗಳಲ್ಲಿ ಅಥವಾ ಕಾರ್ಪೊರೇಷನ್ ಪ್ರದೇಶದಲ್ಲಿ ಮನೆಗಳನ್ನೇ ಆಗಲ ಅಥವಾ ಗುಡಿಸಿಲುಗಳನ್ನೇ ಆಗಲ ಕಟ್ಟಿಕೊಂಡಿದ್ದರೆ ಅಂಥವರ ಬಗ್ಗೆ ಉಗ್ರ ಕ್ರಮ ಕೈಗೊಳ್ಳಲಾಗು ತ್ತದೆ ಎಂಬ ಅಂಶವನ್ನು ಪತ್ರಿಕಾ ಪ್ರತಿನಿಧಿಗಳಿಗೂ ತಿಳಿಸಿದ್ದೇನೆ. ನಾನು ಸುಮ್ಮನೆ ಒಂದು ಹುಕುಂ ಹೊರಡಿಸಿ ಕುಳಿತುಕೊಳ್ಳಲಿಲ್ಲ. ಅದಕ್ಕೆ ಸಾಕಷ್ಟು ಪ್ರಚಾರವನ್ನು ನಡೆಸಿದ್ದೇನೆ. ಆ ಅಜೆಂಡಾಯ ಪ್ರಕಾರ ಇಲಾಖೆಯವರು ಸ್ಥಳ ಪರಿಶೀಲನೆ ಮಾಡಿ ಯಾರು ಎಲ್ಲೆಲ್ಲ ಕಾನೂನು ಬಾಹಿರವಾಗಿ ಕಟ್ಟಡಗಳನ್ನು ಕಟ್ಟಿದ್ದಾರೆ ಅಂಥವರ ಬಗ್ಗೆ ಕ್ರಮ ಕೈಗೊಂಡಿದ್ದಾರೆ. ಮುಂದೆಯೂ ಕೂಡ ಆ ಕ್ರಮ ಕೈಗೊಳ್ಳತಕ್ಕವರಾಗಿದ್ದಾರೆ. ಹಾಗೆ ಅಕ್ರಮ ನಡವಳಿಕೆಗಳನ್ನು ನಾನು ತಡೆಗಟ್ಟದಿದ್ದರೆ ಆ ಸ್ಥಾನದಲ್ಲಿರುವುದಕ್ಕೆ ಅನರ್ಹ. ಆದರೆ ಅಕ್ರಮಣಕಾರರ ಬಗ್ಗೆ ಕ್ರಮ ಕೈಗೊಂಡರೆ ನನಗೆ ಅವರ ಬಗ್ಗೆ ಮರುಕವಿಲ್ಲ ಎಂತಲೇ ಇವರ ಅಭಿಪ್ರಾಯ ? ಇದರಲ್ಲಿ ಇನ್ನೂ ಒಂದು ವಿಚಾರವಿದೆ ಎಂದರೆ ಯಾರು ಈ ದಿವಸ ಸಮಾಜದಲ್ಲಿ ಮುಂದುವರಿದಿದ್ದಾರೆ, ಯಾರು ದೊಡ್ಡವರು ಎಂದೆನಿಸಿಕೊಂಡಿದ್ದಾರೆ ಅಂಥವರು ಕೆಲವರು ಇದರಲ್ಲಿ ಸೇರಿದ್ದಾರೆ. ಸರ್ಕಾರದವರು ಕೆಲವು ದಿನಗಳ ಕೆಳಗೆ ಒಂದು ಅಜೆಂಡಾಯನ್ನು ಹೊರಡಿಸಿ ಬಡವರಾಗಿರತಕ್ಕ ಜನರಿಗೆ ಯಾರು ಯಾರಿಗೆ ವಾಸಕ್ಕೆ ನಿವೇಶನಗಳು ಇಲ್ಲವೋ ಅಂಥವರಿಗೆ ಸರ್ಕಾರದವರು ನಿವೇಶನಗಳನ್ನು ಒದಗಿಸುತ್ತಾರೆಂದು ಅದರಲ್ಲಿ ತಿಳಿಸಿದ್ದರು. ಆ ಅಜೆಂಡಾಯನ್ನು ನದುಪಯೋಗ ಪಡಿಸಿಕೊಳ್ಳಲು ಕೆಲವು ದೊಡ್ಡವರು ತಮ್ಮ ಕೈಕೆಳಗೆ ಇರತಕ್ಕ ಜೀತದ ಜನರಿಗೆ ಅಕ್ರಮವಾಗಿ ಸರ್ಕಾರಿ ನಿವೇಶನಗಳಲ್ಲಿ ಇಲ್ಲವೇ ಟ್ರಸ್ಟ್ ಬೋರ್ಡ್ ನಿವೇಶನಗಳಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳುವಂತೆ ಪ್ರೇರೇಪಿಸಿದ್ದಾರೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ : ನಾನು ಕೆಲವು ದಿನಗಳ ಹಿಂದೆ ಎಡೆಯೂರು ರೇಂಜಿಗೆ ಹೋಗಿದ್ದಾಗ ಅಲ್ಲಿ ಅಕ್ರಮ ವಾಗಿ ಜನರು ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದರು. ಆ ದಿವಸ ಅವರು ವಾಸ ಮಾಡುತ್ತಿದ್ದ ಗುಡಿಸಿಲುಗಳ ಸಂಖ್ಯೆ ಎಲ್ಲಾ 150 ಇದ್ದರೆ ಹೆಚ್ಚಾಯಿತು. ಆದರೆ ಅದಾದನಂತರ ನಾನು ಮತ್ತೆ ಅದೇ ಏರಿಯಾಕ್ಕೆ ಒಂದು ವಾರದ ನಂತರ ಹೋದಾಗ ಅಲ್ಲಿ ಸುಮಾರು 1,500 ಗುಡಿಸಿಲುಗಳು ಇದ್ದುದನ್ನು ನಾನೇ ಕಂಡಿದ್ದೇನೆ. ಹೀಗಾಗುವುದಕ್ಕೆ ಯಾರು ಕಾರಣರು ? ಹೀಗೆರಾಜ್ಯ ನಡೆಯುತ್ತಿರುವುದರಿಂದಲೇ ಯಾರು ನಿಜವಾಗಿಯೂ ಬಡವರಾಗಿದ್ದಾರೊ ಅವರಿಗೆ ಯಾವ ಅನುಕೂಲವೂ ದೊರೆಯದೆ ಎರಾಜ್ಯ ಸೌಲಭ್ಯಗಳೂ ಅನರ್ಹರಿಗೆ ದೊರೆಯುತ್ತಿವೆ. ಇಂಥ ಅಕ್ರಮ ನಡವಳಿಕೆಗಳನ್ನು ನಾನು ನೋಡಿ ನೋಡಿ ಕೈಕಟ್ಟಿ ಕುಳಿತುಕೊಳ್ಳಲೇ ? ಇದರಲ್ಲಿ ಯಾರು ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ವಾಟಾಳರು ಏನೋ ಮರುಕ ಪಟ್ಟು ಅವರು ಇಲ್ಲಿ ವಿಚಾರವನ್ನು ಹೇಳಿರಬಹುದು. ಆದರೆ ಅವರ ಬಗ್ಗೆ ನನಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಕೇವಲ ಬಡವರಾಗಿದ್ದರೆ ಸಾಲದು ಅವರು ಕಾನೂನಿನ ಚೌಕಟ್ಟಿನಲ್ಲಿದ್ದರೆ ಅಂಥವರಿಗೆ ನಾನು ಮರುಗತಕ್ಕವನೇ ಆದರೆ ನನಗೆ ಅವರ ಬಗ್ಗೆ ಮರುಕವಿದೆ ಎಂದು ಹೇಳಿ ಅವರು ಹದ್ದು ಮೀರಿ ವರ್ತಿಸುವುದಕ್ಕೆ ನಾನೇ ಅವಕಾಶ ಕೊಟ್ಟರೆ ನಾಳೆ ನಾನು ಯಾವ ಕೆಲಸವನ್ನು ಮಾಡುವುದಕ್ಕೂ ಬಹಳ ಕಷ್ಟವಾಗುತ್ತದೆ. ನಾನು ಹೊಸಹಳ್ಳಿಯಲ್ಲಿ ಆ ಪ್ರಕರಣ ನಡೆದ ದಿವಸ ದೆಹಲಿಯಲ್ಲಿದ್ದೇ. ಇದೇ ವಿಚಾರದಲ್ಲಿ ಮಾನ್ಯ ಬಂಗಾರಪ್ಪನವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದರು. ಆ ಪತ್ರವನ್ನು ನನ್ನ ಕಡೆಗೆ ಕಳುಹಿಸಿ ದ್ದಾರೆ. ನಾನು ಮಾನ್ಯ ಬಂಗಾರಪ್ಪನವರಿಗೆ ಉತ್ತರ ಬರೆದಿದ್ದೇನೆ. ಶ್ರೀ ವಾಟಾಳ್ ನಾಗರಾಜ್ ಅವರು ಈ ಜನರ ಬಗ್ಗೆ ಒಂದು ಅನುಕಂಪದಿಂದ ಮಾತನಾಡಿದ್ದಾರೆ, ಶ್ರೀ ದೇವೇಗೌಡರು ನಾನು ಎದುರಿಗೆ ನಿಂತು ಹೊಸಹಳ್ಳಿಯಲ್ಲಿ ಆ ಕಟ್ಟಡವನ್ನು ಹೊಡೆಸಿ ಹಾಕಿದೆ ಎಂದು ಆರೋಪಣೆ ಮಾಡಿ ದ್ದಾರೆ. ಅದು ಸರಿಯಲ್ಲ. ನಾವೆಲ್ಲರೂ ಸಾರ್ವಜನಿಕ ಕ್ಷೇತ್ರದಲ್ಲೇ ಕೆಲಸ ಮಾಡತಕ್ಕವರು. ಆದರೆ ಅವರು ಆಡತಕ್ಕಂಥ ಅಸತ್ಯದ ಮಾತನ್ನು ನಾನಂತೂ ಖಂಡಿತ ಕೇಳಲಾರೆ. ಅನುಕಂಪ ನಮಗಿಲ್ಲದಿ ರುವುದು ನಿಮಗೆ ಹೇಗೆ ಬಂತು ? ಈಗಲಾದರೂ ನಿಮಗೆ ಬಂದಿರುವುದು ಬಹಳ ಸಂತೋಷ. ಇದರ ಬಗ್ಗೆ ಯಾವ ವೈಯಕ್ತಿಕ ಸಾಧನೆ ಮಾಡುವುದಕ್ಕೂ ನಾವು ಹೋಗಿಲ್ಲ. ನಾವು ಸರಕಾರ ಅನುಸರಿಸ ಬೇಕಾದ ಕ್ರಮವೇನಿದೆ ಅದರ ಪ್ರಕಾರ ಕೆಲಸ ಮಾಡಿದ್ದೇವೆ. ಅಧಿಕಾರಿಗಳೂ ಸಹ ಅದರಂತೆ ಕೆಲಸ ಮಾಡಿದ್ದಾರೆ. ಹದ್ದುಮೀರಿ ಯಾರಾದರೂ ಕೆಲಸಮಾಡಿದ್ದರೆ, ಕಾರ್ಪೊರೇಷನ್ ಅಥವ ಟ್ರಸ್ಟ್ ಬೋರ್ಡಿಗೆ ಸೇರಿದ ಜಮೀನಿನಲ್ಲಿ ಶ್ರೀಮಂತರು ಅಥವ ಬಡವರು ಯಾರೇ ಆಗಲ ಮನೆ ಕಟ್ಟಲು ಪ್ರಯತ್ನ ಮಾಡಿದ್ದರೆ, ಯಾರ ಪ್ರೇರೇಪಣೆಯಿಂದಲಾದರೂ ಹಾಗೆ ಮಾಡಿದರೆ ತೀವ್ರ ಕ್ರಮ ತೆಗೆದು ಕೊಳ್ಳುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

ಶ್ರೀ ಎಚ್. ಡಿ. ದೇವೇಗೌಡ.—ಅವರು ಮಂತ್ರಿಗಳಾದಮೇಲೆ ಹುಕುಂ ಕೊಟ್ಟಿದ್ದಾರೆ, ಮನೆ ಒಡೆಯುವ ಕೆಲಸವನ್ನು ಕಾನೂನು ಬದ್ಧವಾಗಿ ಮಾಡುತ್ತಿದ್ದಾರೆ. ಕಾಯಿದೆ ಉಲ್ಲಂಘನೆ ಮಾಡಿ ಕಟ್ಟಿರುವ ಮನೆಯನ್ನು ಒಡೆಯುವುದಕ್ಕೆ ಹುಕುಂ ಆಗಿದೆ. ಬಡವರ ಬಗ್ಗೆ ಭಾರಿ ಅನುಕಂಪ ತೋರಿಸಿದ್ದಾರೆ. ಹೀಗೆ ಮಾಡಿರುವುದಾಗಿ ಹೇಳುತ್ತಿದ್ದಾರೆ. ಅಧಿಕಾರಿಗಳು ಎಷ್ಟು ಮನೆ ಕೆಡವಿಸಿದ್ದಾರೆ ? ಅವರು ಅಧಿಕಾರಕ್ಕೆ ಬಂದು ಮೂರು ತಿಂಗಳಾಯ್ತು. ಅವರು ಹುಕುಂ ಕೊಟ್ಟಿರುವುದು ಯಾವಾಗ ? ಇದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ನೋಟೀಸ್ ಕೊಡಬೇಕು.

Sri H. D. DEVE GOWDA.—Why do you make a statement when you have no facts and figures ?

Sri B. BASAVALINGAPPA.—Why do you make such a statement without any basis ?

Sri H. D. DEVE GOWDA.—I know what the charges are. ಆಮೇಲೆ ಎರಡನೆಯದಾಗಿ ನಾನು ಅವರಮೇಲೆ ಆಪಾದನೆ ಮಾಡಿದ್ದೇನೆ. ಅವರು ಮಹಡಿ ಕಟ್ಟುತ್ತಾ ಇದ್ದಾರೆ. ಅದಕ್ಕೆ ಲೈಸೆನ್ಸ್ ಯಾವಾಗ ತೆಗೆದುಕೊಂಡಿದ್ದಾರೆ ? ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಉತ್ತರ ಕೊಡಬೇಕು ; ಫೈಲು ತರಿಸಬೇಕು. ಒಂದು ವೇಳೆ ನಾನು ಮಾಡಿರುವ ಆಪಾದನೆ ಆಧಾರರಹಿತವಾಗಿದ್ದರೆ ಅದನ್ನು ಬೇಕಾದರೆ ವಾಪಸು ತೆಗೆದುಕೊಳ್ಳುತ್ತೇನೆ. ದಯಮಾಡಿ ಸರಕಾರದವರು ನೂಡನೆ ಕೊಟ್ಟು ಸಂಬಂಧಪಟ್ಟ ಫೈಲನ್ನು ತರಿಸಬೇಕು. ಎರಡು ವಿಷಯಗಳಲ್ಲಿ ನಾನು ಮಾಡಿರುವ ಆಪಾದನೆಯನ್ನು ನಾನು ಸಮರ್ಥನೆ ಮಾಡುತ್ತೇನೆ. ಸಂಬಂಧಪಟ್ಟ ಫೈಲನ್ನು ಸಭೆಯಮುಂದಿಟ್ಟು ಸಭೆ ಪರಿಶೀಲಿಸಿದನಂತರ ಏನು ಬೇಕಾದರೂ ಮಾಡಬಹುದು.

Sri D. B. KALMANKAR.—I rise to a Point of Order. May I know whether the time of the sitting of the House has been extended ?

MADAM SPEAKER.—Yes, it has been extended. There is no Point of Order in it.

ಶ್ರೀ ವಾಟಾಳ್ ನಾಗರಾಜ್.—ಮನೆಯನ್ನು ಒಡೆದ ಬಗ್ಗೆ ಕೆಲವು ಮಾತುಗಳನ್ನಾಡಿದರು. ಟ್ರಸ್ಟ್‌ಬೋರ್ಡಿನವರು ನಮಗೆ ಜಾಗ ಸೇರಿದೆ ಎಂದು ಹೇಳುವುದು ಒಂದು ಕಡೆ ಇದೆ. ಆದರೆ ರೆವೆನ್ಯೂ ಸೈಟು ಎಂದು ಇನ್ನೊಂದು ಕಡೆ ಹೇಳುವುದು ಇದೆ. ನನ್ನೆಯಿಂದ ವಿಚಾರಮಾಡಿದಾಗ ಈ ಮನೆ ಬಿಟ್ಟು ಬೇರೆ ಕೆಲವು ಮನೆಗಳಿಗೆ ಸಿಟಿ ಕಾರ್ಪೊರೇಷನ್ನಿಂದ ಲೈಸೆನ್ಸ್ ಕೊಡಲಾಗಿದೆ, ಮನೆ ಕಟ್ಟಲು ಪ್ಲಾನು ಮಂಜೂರಾಗಿದೆ. ನನ್ನಲ್ಲಿ ಈ ಬಗ್ಗೆ ಅಂಕಿಅಂಶವಿದೆ. ಯಾವರೀತಿ ಅದನ್ನು ಸಭೆಯಮುಂದೆ ತರಬೇಕೆಂಬುದನ್ನು ವಿಚಾರಮಾಡಿ ನೋಡುತ್ತೇನೆ. ಈ ದಿವಸ ಗುಡಿಸಲುಗಳವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಶ್ರೀಮಾನ್ ಬಸವಲಿಂಗಪ್ಪನವರಮೇಲೆ ಆರೋಪ ಮಾಡಬೇಕೆಂಬ ಚಟ ನನಗಿಲ್ಲ, ಹಿಂದೆ ನಾವೆಲ್ಲಾ ಅನ್ಯೋನ್ಯವಾಗಿದ್ದೆವು. ಈಗ ಯಾರ ಮನೆ ಕೆಡವಿಸಿದ್ದಾರೋ ಅವರು ನಮ್ಮ ಪಕ್ಷಕ್ಕೆ ಓಟು ಮಾಡಿರುವವರು, ನಿಮಗೆ ಸಂಬಂಧಪಟ್ಟವರು. ಮನೆ ಕಳೆದು ಕೊಂಡವರು ಕಣ್ಣೀರು ನುರಿಸಿದ್ದಾರೆ. ಕೆಲವರು ಬಾಯಲ್ಲಿ ಒಳ್ಳೆಯ ಮಾತನಾಡಿದವರು. ಯಾರಾದರೂ ಅಕ್ರಮವಾಗಿ ಮನೆ ಕಟ್ಟಿದ್ದರೆ ಒಡೆದುಹಾಕುವುದಾಗಿ ಹೇಳಿದರು. ಆದುದರಿಂದ ನಾನು ಮನವಿ ಮಾಡುವುದು ನಾಳೆ ನದಾಶಿವನಗರದಲ್ಲಿ ತಮ್ಮ ಮನೆಯಿಂದ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಮನೆಯವರೆಗೆ ಸರ್ವೆ ಮಾಡಬೇಕು, ಪ್ಲಾನಿನ ಪ್ರಕಾರ ಅಲ್ಲಿ ಮನೆಗಳನ್ನು ಕಟ್ಟಿರುವರೇ ಎಂಬುದನ್ನು ಪರಿಶೀಲಿಸಬೇಕು ಎಂದು. ಫೈವ್ ಸ್ಟಾರ್‌ನವರು ನೀವು ; ನೀವು ದೊಡ್ಡವರು. ಹಿಂದೆ ದಿವಾನರಿದ್ದರು, ಅವರಿಗಿಂತ ನಿಮಗೆ ಎರಡು ಕೊಂಬು ಜಾಸ್ತಿ ಇದೆಯೇ ಎಂಬುದನ್ನು ವಿಚಾರಮಾಡಬೇಕು. ಕಾರ್ಪೊರೇಷನ್ ರಿಕಾರ್ಡ್ ತರಿಸಿ ಯಾರು ಕಾನೂನಿಗೆ ಮೀರಿ ಮನೆ ಕಟ್ಟಿದ್ದಾರೆ ಎಂಬುದನ್ನು ನೋಡಿ.

ಶ್ರೀ ಬಿ. ಬಸವಲಿಂಗಪ್ಪ.— ಅದಕ್ಕೆ ಸಹಕರಿಸುವಿರಾ ?

ಶ್ರೀ ವಾಟಾಳ್ ನಾಗರಾಜ್.—ಖಂಡಿತ ಮಾಡುತ್ತೇವೆ. ಮನೆ ಇಲ್ಲದೆ ನಿರ್ಗತಿಕರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಕೆಲವು ಹಳೆಯ ಗುಡಿಸಲುಗಳಿವೆ. ಮೇಯರ್ ಶ್ರೀ ತಿಪ್ಪಾರಿಯವರು ತಮ್ಮ ಗುಡಿಸಲು ಹಾಕಿದ್ದಾರೆ. ಅವರಿಗೆ ಸೈಟ್ ಕೊಡಿಸಲು ಆಗಲಲ್ಲವೇ ಎಂದು ಕೇಳಬಹುದು, ಅದು ನನಗೆ ಗೊತ್ತಿಲ್ಲ.

Sri C. M. ARUMUGAM.—My friend Sri Vatal Nagaraj says that even the brother of the Mayor of Bangalore is a slum dweller. It is a pity that the Mayor's brother is living in the slum area in Hosahally. I feel that the Mayor or the Government should provide a house for him.

ಶ್ರೀ ವಾಟಾಳ್ ನಾಗರಾಜ್.—ಅವರು ಗುಡಿಸಲು ಹಾಕಿಸಿ ಕೊಟ್ಟಿದ್ದಾರೆ ಎಂದು ಹೇಳಿದೆ. ಅಲ್ಲಿರತಕ್ಕ ಜನರು ತೀರಾ ಬಡವರಾಗಿದ್ದಾರೆ, ಅವರು ಬಹಳ ತೊಂದರೆಯಲ್ಲಿದ್ದಾರೆ. ಅಂಥಾ ಬಡ ಜನಗಳಿಗೆ ತಾವು ಗುಡಿಸಲುಗಳನ್ನು ಕೀಳಿಸಿ ಹಾಕುವ ಕೆಲಸ ಮಾಡುತ್ತಿದ್ದೀರಿ. ಅವರಿಗೆ ಇರುವುದಕ್ಕೆ ಜಾಗ ಕೊಟ್ಟಿಲ್ಲ. ಗುಡಿಸಲುಗಳನ್ನೂ, ಕೊಳಚೆ ಪ್ರದೇಶಗಳನ್ನೂ ಹೋಗರಾಡಿಸಿ, ಮನೆಗಳು ಇಲ್ಲದೇ ಇರುವವರಿಗೆ ಮನೆಗಳನ್ನೂ ಕೂಡ ಕಟ್ಟಿಸಿಕೊಡುವ ಒಂದು ಯೋಜನೆಯನ್ನು ಕೇಂದ್ರಸರ್ಕಾರದವರು ಕೈಗೊಂಡಿದ್ದಾರೆ ಎಂದು ಮಾನ್ಯ ಬಸವಲಿಂಗಪ್ಪನವರು ಹೋದ ಹೋದ ಕಡೆಯಲ್ಲೆಲ್ಲಾ ಉದ್ದ ಉದ್ದವಾದ ಭಾಷಣಮಾಡಿ ಹೇಳಿದ್ದಾರೆ. ಆದುದರಿಂದ ಅಧ್ಯಕ್ಷರ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಅವರು ತಮ್ಮ ಜಾಗದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಈಪೊತ್ತು ಅವರು ಒಂದು ಪ್ರದರ್ಶನ ನಡೆಸಿದ್ದಾರೆ. ತಾವು ಅದನ್ನು ಹೊರಗಡೆ ಹೋಗಿ ನೋಡುವುದಕ್ಕೆ ನನ್ನ ಅಭ್ಯಂತರ ವೇನಿಲ್ಲ. ತಾವು ಆ ಗುಡಿಸಲುಗಳನ್ನು ಕೀಳಿಸದೇ ಇದ್ದಿದ್ದರೆ ಇಂತಹ ದುರಂತ ನಡೆಯುತ್ತಾ ಇರಲಿಲ್ಲ. ಪೋಲೀಸಿನವರನ್ನು ನುಗ್ಗಿಸಿ ಅಲ್ಲಿರುವ ಗುಡಿಸಲುವಾಸಿಗಳನ್ನು ಓಡಿಸುತ್ತಿದ್ದಾರೆ. ಆದುದರಿಂದ ತಾವು ಇದರ ಬಗ್ಗೆ ನಮಗೆ ಆಶ್ವಾಸನೆ ಕೊಡಬೇಕು. ಅಧ್ಯಕ್ಷರಿಗೆ ಬಡವರನ್ನು ಕಂಡರೆ ತುಂಬಾ ಕರುಣೆ ಇದೆ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಆದ್ದರಿಂದ ತಾವು ಆ ಜನರನ್ನು ಹೋಗಿ ನೋಡಿದರೆ ಮುಂದೇನಾಗುತ್ತದೋ ಗೊತ್ತಿಲ್ಲ. ಆ ಜನರಿಗೆ ತಾವು ರಕ್ಷಣೆ ಕೊಡಬೇಕು ಎಂದು ಕೇಳುತ್ತೇನೆ. ನೀವು ಆ ಜನಗಳಿಗೆ ರಕ್ಷಣೆ ಕೊಡದಿದ್ದರೂ ಕೂಡ ಪೊಲೀಸಿನವರು ಏನಾದರೂ ತೊಂದರೆ ಕೊಟ್ಟರೆ ನಾವು ಆ ಜನಗಳ ಹಿಂದೆಯೇ ಹೋಗುತ್ತೇವೆ. ಆದುದರಿಂದ ಆ ಜನಗಳಿಗೆ ರಕ್ಷಣೆ ಕೊಡುವುದಕ್ಕೆ ಬಡವರಿಗೆ ಆದರ್ಶವಾಗಿರತಕ್ಕ ಮಂತ್ರಿಗಳು ಒಂದು ಆಶ್ವಾಸನೆ ಕೊಡುವುದಕ್ಕೆ ಧೈರ್ಯ ಮಾಡಲಿ ಎಂದು ಹೇಳುತ್ತೇನೆ. ನಿಜವಾಗಿಯೂ ಬಡವರಲ್ಲಿ ಕರುಣೆಯಿರತಕ್ಕ ಮಂತ್ರಿಗಳಿಗೆ ಅವರ ಜಾಗಗಳನ್ನು ಖಾಲಿ ಮಾಡಬೇಡಿ ಎಂದು ಹೇಳುತ್ತೀರಾ ಎಂದು ಕೇಳುತ್ತೇನೆ.

ಎರಡನೆಯದಾಗಿ ಕಟ್ಟಿಸಿರುವ ಮನೆಯೊಂದನ್ನು ಒಡೆಸಿ ಹಾಕಿದ್ದಾರೆ. ಇಡೀ ಬೆಂಗಳೂರಿನಲ್ಲಿ ಮಾವರಿಯಾಗಿರತಕ್ಕ ಸದಾಶಿವನಗರದಲ್ಲಿ ದೊಡ್ಡ ದೊಡ್ಡ ಪ್ರಭಾವ ವ್ಯಕ್ತಿಗಳು, ದೊಡ್ಡ ದೊಡ್ಡ ಅಧಿಕಾರಿಗಳು, ಕಾರ್ಪೊರೇಷನ್ನಿನ ಆಜ್ಞೆಗಳನ್ನು ಲೆಕ್ಕಿಸದೆ, ಕಾನೂನು ಬಿಟ್ಟು ಏನು ಪ್ಲಾನ್ ಇದೆ, ಆ ಪ್ಲಾನ್‌ನಂತೆ ಕಟ್ಟದೆ ಬೇರೆ ರೀತಿಯಲ್ಲಿ ಮನೆಗಳನ್ನು ಕಟ್ಟಿರತಕ್ಕಂಥ ಸಾವಿರಾರು ನಿದರ್ಶನಗಳನ್ನು ಕೊಡುತ್ತೇನೆ. ಅವರ ಮನೆಗಳನ್ನು ಒಡೆಸಿ ಹಾಕುವುದಕ್ಕೆ ನಿಮಗೆ ಧೈರ್ಯ ಇದೆಯೇ ? ಇಲ್ಲದೇ ಹೋದರೆ ನೀವು ತಮ್ಮ ಅಧಿಕಾರಕ್ಕೆ ರಾಜೀನಾಮೇ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಆಗಬಹುದು.

ಶ್ರೀ ವಾಟಾಳ್ ನಾಗರಾಜ್.—ಕಾನೂನು ಎಲ್ಲರಿಗೂ ಒಂದೇ. ಅವರು ಯಾವ ದೊಡ್ಡ ಅಧಿಕಾರಿಗಳಾಗಿಯೇ ಇರಲಿ, ಅವರು ಯಾವ ಶಾಸಕರೇ ಆಗಿರಲಿ, ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದರೆ ಅವನ್ನು ಒಡೆಸುವುದಕ್ಕೆ ಸಿದ್ಧರಿದ್ದೀರಾ ? ಇಲ್ಲದೇ ಹೋದರೆ ತಾವು ರಾಜೀನಾಮೆ ಕೊಡುವುದಕ್ಕೆ ಸಿದ್ಧರಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ರಾಜೀನಾಮೆ ಕೊಡುವುದಕ್ಕೆ ಒಪ್ಪಿದ್ದೇನೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ನನ್ನ ಸವಾಲನ್ನು ಒಪ್ಪಿ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಆ ರೀತಿ ಸಭೆಯಲ್ಲಿ ಹೇಳಿರುವುದರಿಂದ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

Sri K. H. PATIL.—I do respect the verdict of the people and do respect the challenge that has been made. The Hon. Minister has been pleased to say that he would place the file before you concerning the subject and after perusing the file, you can decide the matter. If, the Hon. Member goes on making a challenge, will it be a happy atmosphere in the democratic set up? I would like to know from the Hon. the Leader of the Opposition and Sri Vatal Nagaraj whether it would lead us anywhere? The manner in which we are tackling the subject is not proper. So, I request you to keep an open mind when the Minister has volunteered himself to place the file on the table of the House.

Sri H. D. DEVE GOWDA.—I have made two allegations. One in connection with the dismantling of the Houses and the other in connection with the Construction of the Houses without licences. ದಯವಿಟ್ಟು ಫೈಲು ತರಿಸಿ ಇಡಿ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎನ್ನುವ ಇಚ್ಛೆ ನನಗಿಲ್ಲ. ಈ ರೀತಿ ಅಕ್ರಮವಾಗಿ ಕಟ್ಟಿರತಕ್ಕಂಥ ಮನೆಗಳು ಸಾವಿರಾರು ಇವೆ. ಅವನ್ನು ಕೆಡವಿಸುವುದಕ್ಕೆ ತಮಗೆ ಸಾಧ್ಯವಿಲ್ಲ. ಇದರಲ್ಲಿ ಮಂತ್ರಿಗಳು, ಮಾಜಿ ಮಂತ್ರಿಗಳು, ಶಾಸಕರು, ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು ಮತ್ತು ಬೇರೆ ಬೇರೆ ಬಂಡವಾಳ ಶಾಹಿಗಳು ಇಂಥಾವರೆರ್ನಾ ಸೇರಿದ್ದಾರೆ.

ಒಬ್ಬ ಸದಸ್ಯರು.—ಶ್ರೀ ವಾಟಾಳ್ ನಾಗರಾಜ್‌ರವರಿಗೆ ಇರುವ ಆಸ್ತಿಯನ್ನು ಬಿಟ್ಟು ಬಿಡಿ ತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್.—ನನಗೇನಾದರೂ ಆಸ್ತಿ ಇದ್ದಿದ್ದರೆ ನಾನು ಮೊದಲೇ ಬಿಟ್ಟು ಬಿಡುತ್ತಿದ್ದೆ. ನನ್ನ ಹೆಸರಿಗೆ, ನನ್ನ ಹೆಂಡತಿ ಹೆಸರಿಗೆ ಯಾರ ಹೆಸರಿನಲ್ಲಿದ್ದರೂ ನಾಳೆ ಬೆಳಗ್ಗೇನೇ ನನ್ನ ಪರ್ಮಿಷನ್ ಕೂಡ ಇಲ್ಲದೆ ತೆಗೆದುಕೊಳ್ಳಿ ಎಂದು ಈ ಸಭೆಯಲ್ಲಿ ಹೇಳುತ್ತೇನೆ. ನನ್ನ ಪಚಾರ ಶ್ರೀಮಾನ್ ಬಸಲಿಂಗಪ್ಪನವರಿಗೂ ಗೊತ್ತಿದೆ. ಆದುದರಿಂದ ಮಾನ್ಯ ಮಂತ್ರಿಗಳನ್ನು ರಿಕ್ವೆಸ್ಟ್ ಮಾಡಿ ಕೊಳ್ಳುವುದು ಏನೆಂದರೆ, ಹೊರಗಡೆ ಪ್ರದರ್ಶನ ನಡೆಸತಕ್ಕಂಥ ಜನಗಳಿಗೆ ಒಂದು ರಕ್ಷಣೆ ಕೊಡಲ ಎಂದು. ನಮಗೂ ನಿಮಗೂ ಖಂಡಿತ ಯಾವ ರಾಜಕೀಯವೂ ಇಲ್ಲ ಎಂದು ಹೇಳುತ್ತೇನೆ.

Sri D. B. KALMANKAR.—You are digressing from the subject. Irrelevent things are being repeated here.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುವುದು ರಿಲವೆಂಟ್ ಆಗಿಯೇ ಇದೆ. ಅದೇನೂ ಇರ್ರೆಲವೆಂಟ್ ಆಗಿಲ್ಲ.

ಅಧ್ಯಕ್ಷರು.—ತಾವು ಹೇಳಬೇಕಾದುದನ್ನೆಲ್ಲಾ ಹೇಳಿದ್ದೀರಿ. ಮಂತ್ರಿಗಳು ಎಲ್ಲವನ್ನೂ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ನಾಳೆ ದಿವಸ ಅದರ ಬಗ್ಗೆ ಏನು ಇವೆ ಎನ್ನುವುದನ್ನು ತಿಳಿಸುತ್ತಾರೆ. ಅವರಿಗೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶ ಕೊಡಿ.

MADAM SPEAKER.—The House will adjourn now and will meet again at 9 A.M. on 24th June 1972.

The House adjourned at Twenty Minutes past Six of the Clock to meet again at Nine of the Clock on Saturday, the 24th June 1972.